# ಚಿತ್ರದುರ್ಗ ಜಿಲ್ಲೆಯ ಛಲವಾದಿ ಸಮುದಾಯದ ಧಾರ್ಮಿಕ ಹಾಗೂ ಲೌಕಿಕ ಕಲೆಗಳ ಒಳನೋಟ

**ಪ್ರಭುದೇವ ಸಿ.[1] & ಶಬೀನಾ[2]**

ಸಂಶೋಧನಾ ವಿದ್ಯಾರ್ಥಿ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ರಾಜಾನುಕುಂಟೆ, ಬೆಂಗಳೂರು.

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ರಾಜಾನುಕುಂಟೆ, ಬೆಂಗಳೂರು.

**Received: 28/11/2024 ; Acepted:15/12/2024 ; Published: 09/01/2025**

**DOI: https://doi.org/10.5281/zenodo.14619579**

## ABSTRACT:

ಆಡು ಮುಟ್ಟದ ಸೊಪ್ಪಿಲ್ಲ ಕಲೆಗಳಿಲ್ಲದ ಸಮುದಾಯಗಳಿಲ್ಲ ಎಂಬಂತೆ ಕಲೆ ಎಂಬುದು ಯಾರ ಸ್ವತ್ತಲ್ಲ, ಕಲೆ ಎಲ್ಲರನ್ನು ಕೈಬೀಸಿ ಕರೆಯುತ್ತದೆ ಆದರೆ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ ಎಂಬ ಮಾತು ನಿಜ, ಅದರಂತೆ ಸಂಸ್ಕೃತಿಯ ಒಂದು ಭಾಗವಾಗಿರುವ ಕೆಲವು ಕಲೆಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಛಲವಾದಿ ಸಮುದಾಯದವರಿಗೆ ರಕ್ತದಿಂದಲೇ ಬಂದಿವೆ, ಈ ಸಮುದಾಯವು ಕಲಾ ಕ್ಷೇತ್ರದಲ್ಲಿ ವಿಶೇಷ ಛಾಪು ಮೂಡಿಸುತ್ತ ಕಲೆಯನ್ನು ಉಳಿಸಿಕೊಂಡು ಬಂದಿರುವುದು ಗಮನಾರ್ಹ. ಅವುಗಳೆಂದರೆ ಧಾರ್ಮಿಕ, ಲೌಕಿಕ, ಪ್ರದರ್ಶನತ್ಮಕ, ಜನಪದ ವೈದ್ಯ, ಸೋಭಾನೆ ಪದಗಳು ಮತ್ತು ಸಾಹಿತ್ಯಿಕ ಕಲೆಗಳು.

## KEYWORDS:

ಧಾರ್ಮಿಕ ಕಲೆಗಳು, ಬ್ಯಾಂಡ್‌ಸೆಟ್, ಲೌಕಿಕ ಕಲೆಗಳು, ಚಮ್ಮಾರಿಕೆ, ಛಲವಾದಿ, ಚಿತ್ರದುರ್ಗ.

**ಕಲೆಯ ಉಗಮ:**

ಕಲೆ ಧರ್ಮದ ಅಂಗವಾಗಿರುವಂತೆ ನಮ್ಮ ಸಂಸ್ಕೃತಿಯ ಪ್ರತೀಕವೂ ಹೌದು, ಸಂಸ್ಕೃತಿಯ ಸ್ವರೂಪವು ಜನಪದ ಕಲೆಗಳಲ್ಲಿ ಅಡಗಿದೆ. ಕಾಲ ಮತ್ತು ಪರಿಸರಕ್ಕೆ ತಕ್ಕಂತೆ ಅವು ಬೆಳೆಯುತ್ತ ಬದಲಾಗುತ್ತ ಬಂದಿರುವುದು ಗಮನಾರ್ಹ. ಪರಂಪರಾಗತವಾಗಿ ಬಂದಿರುವ ಮೌಲ್ಯಗಳು, ನಂಬಿಕೆಗಳು, ಜೀವನಪದ್ಧತಿಗಳು ಕಂಪನಗೊಂಡು ಹೊಸ ಜೀವನ ವಿಧಾನ ರೂಪಗೊಳ್ಳಲಾರಂಬಿಸಿತು, ಇದರ ಪ್ರತಿಫಲವೇ ಕಲೆಗಳ ಸ್ವರೂಪ ಹಾಗು ಲಕ್ಷಣಗಳು. ಮಾನವನಿಗೆ ಪ್ರಕೃತಿಯೆ ತಾಯಿ ಪುರಾತನ ಕಾಲದಿಂದ ಮಾನವ ತನ್ನ ಜೀವನೋಪಾಯಕ್ಕಾಗಿ ಪ್ರಾಣಿ–ಪಕ್ಷಿಗಳ ಹಸಿ

ಮಾಂಸ, ಗಡ್ಡೆ-ಗೆಣಸು ಸೊಪ್ಪು-ಸೆದೆ ಸೇವಿಸಿ ಬದುಕಿದ, ಆಹಾರಕ್ಕಾಗಿ ಕಾಡುಗಳಲ್ಲಿ ಅಲೆದು ತನ್ನ ಮಾನವನ್ನು ಮುಚ್ಚಿಕೊಳ್ಳಲು ಪ್ರಾಣಿಗಳ ಚರ್ಮ, ಮರಗಳ ಎಲೆಗಳನ್ನು ಬಳಸುತ್ತಿದ್ದನು, ಮುಂದುವರಿದು ಪ್ರಕೃತಿಯಾಲ್ಲಾಗುವ ಹಲವು ಬಗೆಯ ಪ್ರತಿಕುಲಗಳನ್ನು ನೋಡಿ ಭಯಗೊಳ್ಳುತ್ತಿದ್ದ, ಪ್ರಕೃತಿಯ ಅದ್ಭುತ ಶಕ್ತಿಗಳಾದ ಮಳೆ, ಗಾಳಿ, ಗುಡುಗು, ಸಿಡಿಲಿ, ಮಿಂಚು, ಬೆಂಕಿ, ನೀರು, ಭೂಕಂಪ, ಜ್ವಾಲಾಮುಖಿ ರೋಗರುಜಿನೆಗಳಿಗೆ ತತ್ತರಿಸಿದ ಈ ವಿಚಿತ್ರ ಶಕ್ತಿಗಳ ಹಿಂದೆ ಯಾವುದೋ ಶಕ್ತಿ ಇದೆ ಎಂಬ ಕಲ್ಪನೆಯನ್ನು ಬೆಳಸಿಕೊಂಡ ಆ ಶಕ್ತಿಯನ್ನು ಶಾಂತಗೊಳಿಸಲು ಹಲವು ಬಗೆಯ ಆರಾಧನೆಯನ್ನು ಪ್ರಾರ್ಥನೆಯನ್ನು ಮಾಡತೊಡಗಿದ ಅವುಗಳಿಗೆ ತಕ್ಕಂತೆ ತಾನೇ ದೇವತೆಯಾಗಿ ಕುಣಿಯತೊಡಗಿದ, ಕುಣಿತಕ್ಕೆ ತಕ್ಕಂತೆ ಚೀರ ತೊಡಗಿದ ಆ ಧ್ವನಿಯೇ ಮುಂದೆ ಗಾನವಾಯಿತು.

'ನೃತ್ಯ ಮನುಷ್ಯನ ಮೊದಲ ಕಲೆ ತನಗೆ ಖುಷಿಯಾದಾಗ, ದುಃಖವಾದಾಗ, ಬೇಜಾರವಾದಾಗ ಆತ ಮಾಡಿದ್ದು ಕುಣಿತ ಆಗ ಅವನ ಬಾಯಿಯಲ್ಲಿ ಬಂದಿದ್ದು ರಾಗ, ಕಾಲಕಳೆದಂತೆ ಭಾಷೆ ಅಸ್ಥಿತ್ವಕ್ಕೆ ಬಂದ ಮೇಲೆ ಹುಟ್ಟಿಕೊಂಡಿದ್ದು ಗೀತ, ಕುಣಿತಕ್ಕೆ ಜೊತೆಯಾದದ್ದು ವಾದ್ಯ ಹೀಗೆ ನೃತ್ಯ, ಗೀತ, ವಾದ್ಯಗಳು ಸಮ್ಮಿಲನವೇ ಮೇಳವಾಗಿರಬೇಕು' ಕಲೆ ಎಂಬುದು ಮನುಷ್ಯನ ಜೀವನಕ್ಕೆ ಅತಿ ಮುಖ್ಯವಾದ ಮತ್ತು ಬದುಕಿಗೆ ಹೊಸ ತಿರುವನ್ನು ನೀಡುವ ಒಂದು ದಿವ್ಯ ಶಕ್ತಿ. ನಾಗರಿಕ ಜೀವನದಲ್ಲಿ ಎಲ್ಲಾ ಬಗೆಯ ಕಲೆಗಳ ಮೂಲವನ್ನು ಜನಪದ ಕಲೆಗಳಲ್ಲಿ ನೋಡುತ್ತೇವೆ, ಜನರಿಂದ ಸೃಷ್ಟಿಗೊಂಡ ಕಲೆಯನ್ನೆ ಜನಪದ ಕಲೆಗಳು ಎಂದು ಕರೆಯುತ್ತೇವೆ. ಮಾನವನ ಉಗಮದಷ್ಟೆ ಜನಪದ ಕಲೆಗಳಿಗೂ ಪಾರಂಪರಿಕ ಇತಿಹಾಸ ಇದೆ. ಕಾಲ ಬದಲಾದಂತೆ ಕಲೆಗಳು ಹೊಸ ತಿರುವನ್ನು ಪಡೆದುಕೊಂಡವು. ಮಾನವನ ಬದುಕಿನಲ್ಲಿ ಅಚಾರ-ವಿಚಾರ, ರೀತಿ-ನೀತಿ, ದೇವರು, ಧರ್ಮ, ಸಂಪ್ರದಾಯ, ಪುರಾಣ, ಸಾಂಸ್ಕೃತಿಕ ಸಂಗತಿಗಳು ಇವೆಲ್ಲವು ಜನಪದ ಜೀವನದ ಕೈಗನ್ನಡಿಯಾಗಿವೆ.

'ಕಲೆ ಎಂಬುದಕ್ಕೆ ಋಗ್ವೇದದಲ್ಲಿ ದಿವ್ಯಶಕ್ತಿಯ ಕಾಂತಿಯ ಒಂದು ಕಿರಣ ಎಂಬ ಅರ್ಥವಿದೆ. ಕಲೆ ಎಂದರೆ ಸಾಮಾನ್ಯ ಅರ್ಥದಲ್ಲಿ "ಉಪಾಯ" ಅಥವಾ "ಕೌಶಲ್ಯ" ಎಂಬ ಅರ್ಥಗಳಿವೆ. ಯಾವ ಉಪಾಯದಿಂದ ಅಥವಾ ಯಾವ ಕೌಶಲ್ಯದಿಂದ ನಮ್ಮ ಆಲೋಚನೆಗಳನ್ನು ಮನಮುಟ್ಟುವ ರೀತಿಯಲ್ಲಿ ತಿಳಿಸುವುದೋ ಅಂತಹ ವಿಧಾನವೇ ಕಲೆ.' ಕಲೆ ಹುಟ್ಟಿರುವುದು ಇಂದು ನಿನ್ನೆಯಿಂದಲ್ಲ ಇದಕ್ಕೆ ಪೂರ್ವಕಾಲದ ಇತಿಹಾಸವಿದೆ. ಜನಪದ ಕಲೆಗಳ ಉದ್ದೇಶ, ನಿಸರ್ಗದ ಆರಾಧನೆ ಮತ್ತು ಮನಸ್ಸಿನ ನೆಮ್ಮದಿ, ಹಲವು ಬಗೆಯ ಕಲೆಗಳು ದಿನಕಳೆದಂತೆ ಮನುಷ್ಯನ ಬದುಕಿನ ಕಲೆಗಳಾಗಿ ಪರಿವರ್ತನೆ ಹೊಂದಿದವು. ಕಲೆಗಳು ಮನುಷ್ಯನ ಹೊಟ್ಟೆಪಾಡಿನ ಜೊತೆಗೆ ಭಯ-ಭ್ರಮೆ, ನಂಬಿಕೆ, ದೇವರ ಆರಾಧನೆಗೆ ಹುಟ್ಟಿಕೊಂಡಿರುವವೆ ಜಾಸ್ತಿ

ಈ ಕಲೆಗಳು ಕಾಲಗತಿಗೆ ಸಿಕ್ಕಿ ಮನೋರಂಜನೆಯ ಕಲೆಗಳಾದವು ಅವು ಮನುಷ್ಯನ ಜೀವನಕ್ಕೂ ದಾರಿದೀಪವಾದವು.

**ಛಲವಾದಿ ಸಮುದಾಯದ ಕಲೆಗಳು**

**ಧಾರ್ಮಿಕ ಕಲೆಗಳು:**

ದೇವರು, ಧರ್ಮಗಳ ನಂಬಿಕೆಯ ಹಿನ್ನೆಲೆಯಲ್ಲಿ ಹಲವು ಕಲೆಗಳು ರೂಪು ತಳೆದಿವೆ. ಅಂತವುಗಳಲ್ಲಿ ತಳ ಸಮುದಾಯಗಳಲ್ಲಿಯೇ ಅತಿಹೆಚ್ಚು. ಅಂದರೆ ಗ್ರಾಮದೇವತೆಗಳನ್ನು ಆರಾಧಿಸುವ ವಿಧಿವಿಧಾನಗಳಲ್ಲಿ ಹಲವು ಕ್ರಮಗಳು ಸೃಷ್ಠಿಯಾದವು. ಇದಕ್ಕೆ ಪೂರಕವಾಗಿ ಕರ್ನಾಟಕದಾದ್ಯಂತ ಗ್ರಾಮ ದೇವತೆಗಳು, ಗ್ರಾಮದೇವತೆಗಳ ಆರಾಧಿಸುವ ಕ್ರಮಗಳನ್ನು ಗಮನಿಸಿದಾಗ ಕರ್ನಾಟಕದಾದ್ಯಂತ ಆರಾಧಿಸಲ್ಪಡುವ ‘ಮಾರಿದೇವತೆ’ಯ ಬಗೆಗಿನ ಪುರಾಣಗಳು, ಹಬ್ಬ ಹರಿದಿನಗಳನ್ನು ಆಚರಿಸುವ ಆಚರಣೆಗಳ ಸಂದರ್ಭದಲ್ಲಿ ಪ್ರದರ್ಶಿಸಲ್ಪಡುವ ಕಲೆಗಳ ನಮ್ಮನ್ನು ತೀವ್ರವಾಗಿ ಆಲೋಚನೆಗೆ ಹಚ್ಚುತ್ತವೆ.

ತಳಸಮುದಾಯಗಳ ವಾದ್ಯಗಳಾದ ತಮಟೆ, ಶಹನಾಯಿ, ಶಂಖ, ಕರಡಿಮಜಲು, ಉರುಮೆ, ಕಹಳೆ ಈ ವಾದ್ಯಗಳ ಬಳಕೆಯು ಒಂದು ಕಲೆಯಾಗಿ ಮಾರ್ಪಟ್ಟಿದೆ. ಇವುಗಳನ್ನು ಹಬ್ಬ, ಹರಿದಿನ, ಉತ್ಸವ, ರಥೋತ್ಸವ ಮೊದಲಾದ ಸಂದರ್ಭದಲ್ಲಿ ಪ್ರಯೋಗಿಸಲಾಗುತ್ತದೆ. ಇಂತಹ ವಾದನಗಳು ಪ್ರಮುಖವಾಗಿ ಎರಡು ನೆಲೆಗಟ್ಟಿನಲ್ಲಿ ಪ್ರದರ್ಶನಗೊಳ್ಳುತ್ತವೆ. ಒಂದು ನಾದ ಅರ್ಥಾತ್ ಗೇಯತೆ, ಇನ್ನೊಂದು ನೃತ್ಯ ಅರ್ಥಾತ್ ಕುಣಿತ. ದೇವರಿಗೆ ಅಥವಾ ರಥೋತ್ಸವ ಸಂದರ್ಭದಲ್ಲಿ ಬಳಸುವ ಉರುಮೆ ಅಥವಾ ತಮಟೆಯು ದೇವರ ನಾಮಸ್ಮರಣೆಯನ್ನು ಮಾಡುತ್ತಲೇ ನಾದ ಮಾಧರ್ಯತೆಯನ್ನೂ ಹಾಗೂ ನೃತ್ಯತ್ಮಾಕತೆಯನ್ನು ಹೊಮ್ಮಿಸುವ ಶಕ್ತಿ ಈ ವಾದ್ಯಗಳಿಗಿದೆ. ಸಾಮಾಜಿಕ ಸಂದರ್ಭದಲ್ಲಿ ಬಳಕೆಯಾಗುವ ಈ ವಾದ್ಯಗಳು ಧಾರ್ಮಿಕ ಸಂದರ್ಭದಲ್ಲಿಯೂ ಬಳಕೆಯಾಗುತ್ತಿರುವುದನ್ನು ಕಾಣಬಹುದು. ಆದರೆ ಕೆಲವೊಂದು ವಾದ್ಯಗಳು ಮಾತ್ರ ಆ ಸಂಪ್ರದಾಯಕ್ಕೆ ಮೀಸಲಾಗಿದ್ದು ಉಳಿದ ಯಾವ ಧಾರ್ಮಿಕ ಸಂದರ್ಭದಲ್ಲಿಯೂ ಬಳಕೆಗೊಳ್ಳುವುದಿಲ್ಲ. ಒಂದುವೇಳೆ ಹಾಗೆ ಬಳಕೆಗೊಂಡರೆ ಅದು ಅಪವಿತ್ರ ಎಂಬ ಭಾವನೆಯೂ ಈ ಸಮುದಾಯಗಳಲ್ಲಿ ಉಳಿದುಕೊಂಡಿರುವುದು ಕಂಡುಬರುತ್ತದೆ. ಒಟ್ಟಾರೆ ತಳಸಮುದಾಯಗಳು ಬಳಸುವ ಈ ವಾದ್ಯಗಳು ಆಯಾ ಪ್ರಾದೇಶಿಕ, ಸಾಮಾಜಿಕ ಸಂದರ್ಭಗಳಲ್ಲಿ ಹೆಚ್ಚು ಮಹತ್ವವನ್ನು ಪಡೆದುಕೊಂಡಿವೆ.”[1]

**ಅ) ಉರುಮೆ/ಹರೆ**

ಛಲವಾದಿ ಸಮುದಾಯವು ಬಳಸುವ ಉರುಮೆ ಹಬ್ಬ ಹರಿದಿನಗಳಲ್ಲಿ,

ಜಾತ್ರೆ, ರಥೋತ್ಸವಗಳಲ್ಲಿ ಬಳಸುವ ಪ್ರಮುಖ ವಾದ್ಯಗಳಲ್ಲಿ ಒಂದಾಗಿದೆ. ಉರುಮೆ ಎಂಬ ವಾದನವು ಈ ಸಮುದಾಯಕ್ಕೆ ಪರಂಪರೆಯಿಂದಲೂ ಬಳುವಳಿಯಾಗಿ ಬಂದಿರುವ ಒಂದು ವಾದ್ಯ ಪರಿಕರವಾಗಿದೆ. ಈ ವಾದ್ಯ ಪರಿಕರದೊಂದಿಗೆ ಪ್ರದರ್ಶನಗೊಳ್ಳುವ ಈ ಕಲೆಯು ಛಲವಾದಿ ಸಮುದಾಯದ ಪ್ರಮುಖ ಕಲೆಯಾಗಿ ಮಾರ್ಪಟ್ಟಿದೆ. ಉರುಮೆ ಎಂಬ ವಾದ್ಯವನ್ನು ಹರೆ ಎಂದು ಕರೆಯುವುದುಂಟು. ಈ ಕಲೆಯು ಮೂಲತಃ ಆಂಧ್ರ ಮೂಲದಿಂದ ಕರ್ನಾಟಕಕ್ಕೆ ಬಂದಿದೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಅದರಲ್ಲಿಯೂ ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ ಈ ವಾದ್ಯವನ್ನು ಹೆಚ್ಚಾಗಿ ಬಳಸಲಾಗುತ್ತದೆ. ಅದರಲ್ಲಿಯೂ ಚಿತ್ರದುರ್ಗ, ತುಮಕೂರು, ಬೆಂಗಳೂರು, ಮಂಡ್ಯ ಮೊದಲಾದ ಕಡೆಗಳಲ್ಲಿ ಈ ವಾದ್ಯವನ್ನು ಒಂದು ಕಲೆಯಾಗಿ ಭಾವಿಸಿಕೊಂಡು ನುಡಿಸುತ್ತಾರೆ. ಈ ವಾದ್ಯವನ್ನು ಮಾರಿ, ದುರ್ಗಿ ಮೊದಲಾದ ಹೆಣ್ಣು ದೇವತೆಗಳ ಜಾತ್ರೆ, ಉತ್ಸವ ರಥೋತ್ಸವಗಳಲ್ಲಿ ನುಡಿಸುವುದು ವಾಡಿಕೆ ಹಾಗೆಯೇ ಗಂಡು ದೇವರುಗಳ ಸಂದರ್ಭದಲ್ಲಿಯೂ ಇದು ಪ್ರದರ್ಶನಗೊಳ್ಳುತ್ತದೆ. ಛಲವಾದಿ ಸಮುದಾಯವು ಉರುಮೆ ಅಥವಾ ಹರೆ ಬಾರಿಸುವುದನ್ನು ಒಂದು ವೃತ್ತಿಯನ್ನಾಗಿಸಿಕೊಂಡು ಬದುಕು ನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಇದು ಕೇವಲ ತಳವರ್ಗದ ದೇವರುಗಳ ಮುಂದೆ ಮಾತ್ರ ಪ್ರದರ್ಶನಗೊಳ್ಳದೆ ಮೇಲ್ವರ್ಗದ ದೇವರುಗಳ ಜಾತ್ರೋತ್ಸವದ ಸಂದರ್ಭದಲ್ಲಿಯೂ ನುಡಿಸುವುದು ವಾಡಿಕೆ ಇದೆ. ಹೀಗೆ ನುಡಿಸುವುದು ಜೀವನ ನಿರ್ವಹಣೆಗೂ ಸಹ ಅನುಕೂಲವಾಗುವ ನಿಟ್ಟಿನಲ್ಲಿ ಒಂದು ವೃತ್ತಿಯಾಗಿ ಪರಿಣಮಿಸಿದೆ.

ಉರುಮೆ ಕಲಾವಿದರು ಬಹುಪಾಲ ಹೆಣ್ಣುದೇವತೆಗಳ ಪುರಾಣ ಕಥೆಗಳನ್ನು ಕೊಂಡಾಡಿ ಭಕ್ತರಿಗೆ ಆ ಅಮ್ಮನ ಇತಿಹಾಸವನ್ನು ತಿಳಿಯಪಡಿಸುವುದು ರೂಢಿಯಲ್ಲಿದೆ. ಕರಿಯಮ್ಮ, ಮಾರಮ್ಮ, ದುಗ್ಗಮ್ಮ, ಮಹಾಕಾಳಿ ಮೊದಲಾದ ದೇವತೆಗಳನ್ನು ಕಾಣಬಹುದು. ಅಲ್ಲದೇ ಆ ದೇವತೆಯ ಜಾತ್ರೆ ಮಹೋತ್ಸವಗಳ ಸಂದರ್ಭದಲ್ಲಿ ಕೊನೆಯ ದಿನ ಗಾವು ಜಿಗಿವ ಪದ್ಧತಿಯೂ ಇದೆ. ಈ ಪೋತಲರಾಜರು ಬಹುಪಾಲು ನಾಯಕ ಸಮುದಾಯದವರಾಗಿರುತ್ತಾರೆ. ಗಾವು ಜಿಗಿವ ಮೂರುನಾಲ್ಕು ತಿಂಗಳಿನ ಎಳೆ ಆಡಿನ ಮರಿಯನ್ನು ಗಾವು ಜಿಗಿವ ಮುನ್ನು ದೇವಿಯನ್ನು ಕೊಂಡಾಡುತ್ತಾ ಆ ಆಡಿನ ಮರಿಯನ್ನು ಪೋತಲ ರಾಜರಿಗೆ ಮಂತ್ರಿಸಿ ಕೊಡುವವರು ಇದೇ ಉರುಮೇ ವಾದಕರೇ ಆಗಿರುತ್ತಾರೆ. ಗಾವು ಜಿಗಿವ ಕಾರ್ಯ ಮುಗಿದ ನಂತರ ಆ ಗಾವು ಜಿಗಿದ ಎಳೆ ಮೇಕೆಯ ಮರಿಯನ್ನು ಉರುಮೆ ನುಡಿಸುವವರಿಗೆ ಕೊಡುವುದು ಪದ್ಧತಿ. ಇವರು ಕೇವಲ ಹೆಣ್ಣು ದೇವತೆಗಳಿಗೆ ಮಾತ್ರ ಕೊಂಡಾಡುವವರಲ್ಲದೇ ಕಾಡುಗೊಲ್ಲ, ಬ್ಯಾಸಬೇಡರ ಗಂಡು ದೇವರುಗಳನ್ನೂ ಸಹ ಕೊಂಡಾಡುವ ಪರಂಪರೆ ಇದೆ. ಕೊನೆಯ ದಿನ ಅಮ್ಮ ಗುಡಿದುಂಬವ ಕಾರ್ಯಕ್ಕೆ ಅಮ್ಮಳನ್ನು ಮೆರವಣಿಗೆಯ

ಮೂಲಕ ತೆಗೆದುಕೊಂಡು ಹೋಗುತ್ತಾರೆ. ಆಗ ಈ ಸಮುದಾಯದವರು ತಮ್ಮ ಕಲೆಯ ನೈಪುಣ್ಯತೆಯನ್ನು ತೋರಿಸುತ್ತ ಭಕ್ತ ಜನರ ಮನ ಒಪ್ಪುವಂತೆ ಉರುಮೆಯನ್ನು ನುಡಿಸಿ ಜನರನ್ನು ಮನೋರಂಜಿಸಿ ಪ್ರೇಕ್ಷಕರಿಗೆ ಖುಷಿಯನ್ನು ನೀಡುತ್ತಾರೆ. ಆ ಮೂಲಕ ದೇವರ ಪ್ರೀತಿಪಾತ್ರದಾರರಾಗುತ್ತಾರೆ. ಅದರಲ್ಲಿ ಚಿತ್ರದುರ್ಗ ಜಿಲ್ಲೆಯ ಗೌರಸಮುದ್ರದ ಮಾರಿ ಹಬ್ಬವು ಧಾರ್ಮಿಕ ಮಹತ್ವವನ್ನು ಪಡೆದುಕೊಂಡಿದೆ."[2] ಈ ಜಿಲ್ಲೆಯಲ್ಲಿ ಬರುವ ಮಾರಿ ದೇವತೆಗಳಿಗೆ ಆ ಊರಿನ ಅಥವಾ ಸುತ್ತಮುತ್ತಲಿನ ಛಲವಾದಿ ಸಮುದಾಯದವರು ಹಬ್ಬ-ಹರಿದಿನಗಳಲ್ಲಿ ಉರುಮೆ ವಾದನವನ್ನು ಪಾರಂಪರಿಕವಾಗಿ ಸೇವೆಯನ್ನು ಮಾಡುತ್ತಾ ಬರುತ್ತಿದ್ದಾರೆ. ಅವರಿಗೆ ಸೇವಾ ಕಾಣಿಕೆಯಾಗಿ ಮಾರಿದೇವತೆಗೆ ಬರುವ ಧವಸ-ಧಾನ್ಯಗಳನ್ನು ಅಥವಾ ದೇವತೆಯ ಹೆಸರಿಗಿರುವ ಆಸ್ತಿಯನ್ನು ಈ ಸಮುದಾಯದವರಿಗೆ ದುಡಿದು ತಿನ್ನಲು ಕೊಡುತ್ತಾರೆ. ಇದು ವಂಶ ಪರಂಪರಾತವಾಗಿ ಬಂದಿದೆ.

**ಆ) ಸಮ್ಮಾಳ**

ಛಲವಾದಿ ಸಮುದಾಯದಲ್ಲಿ ಕಂಡುಬರುವ ಧಾರ್ಮಿಕ ಕಲೆಗಳಲ್ಲಿ ಸಮ್ಮಾಳವು ಒಂದಾಗಿದೆ. ಸಮ್ಮಾಳ, ಸಮೇಳ, ಸಂಭಾಳ, ಮೊದಲಾದ ಹೆಸರುಗಳಿಂದ ಕರೆಯಲಾಗುತ್ತಿದೆ. ಒಂದು ಸಮ್ಮಾಳದಲ್ಲಿ ಎರಡು ಹೊಳಲುಗಳಿರುತ್ತವೆ. ಈ ಬಿಡಿ ಹೊಳಲನ್ನು 'ಸಮಳಕಾಯಿ; ಅಥವಾ 'ಸಮಾಳದ ಹೊಳು' ಎಂಬುದಾಗಿಯೂ ಕರೆಯುತ್ತಾರೆ. ಸಮ್ಮಾಳ ವಾದ್ಯವು ಒಂದು ಮಂಗಳಕರ ವಾದ್ಯವಾಗಿದೆ. ವೀರಭದ್ರ ದೇವರ, ಶರಣಬಸವೇಶ್ವರ ಮೆರವಣಿಗೆಯ ಪಲ್ಲಕ್ಕಿ ಉತ್ಸವಗಳಲ್ಲಿ ನಂದಿಕೋಲು ಕುಣಿತಕ್ಕೆ ಹಾಗೂ ಕುಣಿಯುವವರ ಲಯಕ್ಕ ತಕ್ಕಂತೆ ಪುರಾಣದ ಕಥೆಗಳನ್ನು ಕೊಂಡಾಡುತ್ತ ಒಂದು ಎರಡು ಮೂರನೇ ಕಾಲಗತಿಯಲ್ಲಿ ನುಡಿಸಿ ಸಭಿಕರ ಮನ್ನಣೆಯನ್ನು ಪಡೆದುಕೊಳ್ಳುತ್ತಾರೆ. ಚಿತ್ರದುರ್ಗದಲ್ಲಿ ಪ್ರತಿ ವರ್ಷವೂ ನಡೆಯುವ ಶರಣರ ದಸರ ಉತ್ಸವದ ಮೆರವಣಿಗೆಯಲ್ಲಿ ಸಮ್ಮಾಳ ವಾದ್ಯವು ಒಂದು ಮೆರಗನ್ನು ತಂದುಕೊಡುತ್ತದೆ.

**ಇ) ದಾಸಯ್ಯಗಳ ಶಂಖ ಜಾಗಟೆ**

ಶಂಖ ಮತ್ತು ಜಾಗಟೆಯು ಬಾರಿಸುವುದು ಛಲವಾದಿ ಸಮುದಾಯದ ಪ್ರಮುಖ ಧಾರ್ಮಿಕ ಕಲೆಯಾಗಿದೆ. ಶಂಖ ಮತ್ತು ಜಾಗಟೆಯನ್ನು ದಾಸಯ್ಯನವರು ವಾದಿಸುವ ಒಂದು ಪರಿಕರವಾಗಿದೆ. ಈ ದಾಸ ಪರಂಪರೆಯ ಪ್ರಸ್ತಾವನೆ ವೇದಗಳ ಕಾಲದಿಂದಲೂ ಗುರ್ತಿಸಬಹುದು. ಎಂದು ಡಿಡಿ ಕೋಸಂಬಿಯವರು ಅಭಿಪ್ರಾಯ ಪಡುತ್ತಾರೆ. ಅಂದರೆ ಅವರ್ಣರನ್ನು, ಯೇತರರರನ್ನು ಅರ್ಥಾತ್ ಶೂದ್ರರನ್ನು ದಾಸರು ಎಂದು ಗುರ್ತಿಸಲಾಗಿದೆ. ಬುದ್ಧನ ತ್ರಿಪಿಟಕಗಳಲ್ಲಿ ದಾಸರನ್ನು ದಾಸ,

ಕಮ್ಮ(ರ್ಮ)ಕಾರ ಎಂದು ಉಲ್ಲೇಖಿಸಲಾಗಿದೆ. ಈ ದಾಸರು ಬಹುಪಾಲು ಶೂದ್ರರೇ ಆಗಿದ್ದರು ಎಂಬುದನ್ನು ಈ ಕೃತಿಯು ವಿವೇಚಿಸುತ್ತದೆ.

ಛಲವಾದಿ ಸಮುದಾಯದಲ್ಲಿ ಇವರನ್ನು ಚನ್ನದಾಸರು, ಹೊಲೆಯದಾಸರಿ, ಮಾಲದಾಸರಿ ಮುಂತಾದ ದಾಸಯ್ಯಗಳ ಕುಲಗಳಿಗೂ ಒಂದು ರೀತಿಯ ಅನ್ಯೂನ್ಯತೆಯನ್ನು ಕಲ್ಪಿಸಿರುವುದು ಕಂಡಾಗ ಇವರಲ್ಲಿ ಎಡಗೈದಾಸರಿ ಮತ್ತು ಬಲಗೈ ದಾಸರು ತಮ್ಮ ಮಕ್ಕಳನ್ನು ದೇವಾಲಯಗಳಲ್ಲಿ ದಾಸಿಯರನ್ನಾಗಿ ಬಿಡುತ್ತಿದ್ದರು ಎಂಬ ವಾದವೂ ಇದೆ. ಈ ಹಿನ್ನೆಲೆಯಲ್ಲಿ ಬಲಗೈ ದಾಸರು ಗೋವಿಂದ ಗೋವಿಂದ ಎಂದು ನಾಮಸ್ಮರಣೆಯನ್ನು ಮಾಡುತ್ತಾ ಅದನ್ನೇ ತಮ್ಮ ಬದುಕನ್ನಾಗಿಸಿಕೊಂಡಿದ್ದಾರೆ. ಮದುವೆ, ಸಭೆ, ಸಮಾರಂಭಗಳಲ್ಲಿ ಹಬ್ಬಹರಿದಿನಗಳಲ್ಲಿ ಇವರು ಮನೆಮನೆಗಳಿಗೆ ಹೋಗಿ ಶಂಖ ಜಾಗಟೆಯನ್ನು ವೆಂಕಟ ರಮಣಗೋವಿಂದ ಎಂದು ಹೇಳುತ್ತಾರೆ. ಛಲವಾದಿ ಸಮುದಾಯದಲ್ಲಿ ಈ ಕಲೆಯು ಪರಂಪರಾಗತವಾಗಿ ಬಂದು ಅದೊಂದು ವೃತ್ತಿಯಾಗಿ ಮಾರ್ಪಟ್ಟಿರುವುದು ಕಾಣಬಹುದು.

**ಈ) ಮೇಳ/ಬ್ಯಾಂಡ್‌ಸೆಟ್**

ಮೇಳ ಎಂದರೆ ತಂಡ, ಗುಂಪು, ಜಾತ್ರೆ ಮುಂತಾದ ಅರ್ಥಗಳನ್ನು ಒಳಗೊಂಡಿದೆ. ಮದುವೆ ದೇವರ ಉತ್ಸವ, ಜಾತ್ರೆ, ಶುಭಕಾರ್ಯಗಳು, ಸಾವಿನ ಕಾರ್ಯಗಳಲ್ಲಿಯೂ ಛಲವಾದಿ ಸಮುದಾಯದವರ ಗುಂಪೊಂದು ಡೋಲು, ಮೇಳ ಮತ್ತು ಇತರೆ ಮಂಗಳ ವಾದ್ಯಗಳನ್ನು ಬಾರಿಸುವ ಮೂಲಕ ಮದುವೆಯ ಶುಭ ಕಾರ್ಯಗಳಲ್ಲಿ ಈ ವಾದ್ಯಗಳನ್ನು ನುಡಿಸುವವರು ಇದೇ ಸಮುದಾಯದವರೇ ಆಗಿರುತ್ತಾರೆ. ಇದನ್ನು ವೃತ್ತಿ ಆಧಾರಿತ ಕಲೆಯನ್ನಾಗಿ ಗ್ರಹಿಸಿಕೊಂಡಿರುವುದು ಕಂಡುಬರುತ್ತದೆ. ಮಂಗಳ ವಾದ್ಯವೆಂಬುದು ಶುಭ ಸಂಕೇತವಾಗಿದೆ.”[3]

**ಉ) ಕಹಳೆ/ಕೊಂಬು**

ಛಲವಾದಿ ಸಮುದಾಯದವರಲ್ಲಿ ಕಂಡುಬರುವ ಪ್ರಮುಖ ವಾದನವಾಗಿ ಕಹಳೆಯು ಪ್ರಮುಖವಾದುದು. ಕಹಳೆಯನ್ನು ‘ಕೊಂಬು’ ಎಂಬುದಾಗಿಯೂ ಕರೆಯುವುದುಂಟು. “ಕೊಂಬಿನ ತುದಿಗೆ ರಂಧ್ರ ಮಾಡಿ ಗಾಳಿಯನ್ನು ತುಂಬಿದಾಗ ಉಂಟಾದ ಧ್ವನಿಯನ್ನು ಕಂಡು ಪ್ರಾಣಿಗಳ ಕೊಂಬನ್ನೇ ವಾದ್ಯವನ್ನಾಗಿ ಬಳಸಿಕೊಂಡರು. ಮುಂದೆ ಈ ಕೊಂಬುಗಳ ತಂತ್ರವನ್ನು ಬಳಸಿಕೊಂಡು ಲೋಹಗಳಲ್ಲಿಯೂ ಕೂಡ ಕೊಂಬಿನ ಆಕಾರವನ್ನು ಹೋಲುವ ಊದುವ ವಾದ್ಯವನ್ನು ತಯಾರಿಸಿಕೊಳ್ಳಲಾಯಿತು. ಕೊಂಬನ್ನೇ ಹೋಲುವ ಲೋಹವಾದ್ಯಕ್ಕೂ ‘ಕೊಂಬು’ ಎಂಬ ಹೆಸರೆ ರೂಢಿಯಲ್ಲಿ ಉಳಿಯಿತು.”[4] ಕೊಂಬು ಅಥವಾ ಕಹಳೆಯನ್ನು ಮಂಗಳ ವಾದ್ಯವೆಂದೂ ಅನೇಕ ಪ್ರಾಚೀನ ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ. ಶಿವಕೋಟ್ಯಾಚಾರ್ಯನ ವಡ್ಡಾರಾಧನೆ,

ಕೇಶಿರಾಜನ ಶಬ್ದಮಣಿದರ್ಪಣ, ನಿಜಗುಣ ಶಿವಯೋಗಿಯವರ 'ವಿವೇಕ ಚಿಂತಾಮಣಿ' ಮೊಲದಾದ ಕೃತಿಗಳಲ್ಲಿ ಛಲವಾದಿಗಳ ಪ್ರಮುಖ ವಾದನವಾದ ಕಹಳೆಯ ಬಗೆಗೆ ಉಲ್ಲೇಖಗಳಿರುವುದು ಅಧ್ಯಯನದಿಂದ ತಿಳಿದುಬರುತ್ತದೆ.

ಕಹಳೆಯಲ್ಲಿ ಮುಖ್ಯವಾಗಿ ಧರ್ಮಗಹಳೆ, ರಣಗಹಳೆ, ಜಾವಗಹಳೆ ಮೊದಲಾದ ವಿಧಗಳಿರುವುದು ಕಂಡುಬರುತ್ತದೆ. ಇದನ್ನು ಯಾವ್ಯಾವ ಸಂದರ್ಭದಲ್ಲಿ ಬಳಸಲಾಗುತ್ತದೆ ಎಂದರೆ ಧಾರ್ಮಿಕವಾಗಿ ದೇವಾಲಯಗಳಲ್ಲಿ ಹಾಗೂ ದೇವರ ಉತ್ಸವ ಮತ್ತು ಮೆರವಣಿಗೆಗಳಲ್ಲಿ ಈ ವಾದನವನ್ನು ಬಳಸಲಾಗುತ್ತದೆ. ಏಕೆಂದರೆ ಇದೊಂದು ಮುನ್ನುಡಿಯ ವಿಜಯದ ಸಂಕೇತವಾಗಿದೆ. ಪಂಪನ ಕೃತಿಗಳು ಉಲ್ಲೇಖಿಸುವಂತೆ ಯುದ್ಧವರ್ಣನೆಯ ವಿಜಯೋತ್ಸವದ ಸಂದರ್ಭದಲ್ಲಿ ಈ ಕಹಳೆಯನ್ನು ಉಲ್ಲೇಖಿಸಲಾಗಿದೆ. ಹಾಗೆಯೇ ಇದನ್ನು ರಣಕಹಳೆಯೆಂತಲೂ ಕರೆಯುವುದುಂಟು. ಅಂದರೆ ಯುದ್ಧ ಸನ್ನಿಹಿತವನ್ನು ತಿಳಿಸಲಿಕ್ಕೆ ಅರಮನೆಯ ಕಾವಲುಗಾರರು ಕಹಳೆಯುನ್ನು ಊದುವ ಮೂಲಕ ಯುದ್ಧಕ್ಕೆ ಸನ್ನದ್ಧಾಗುವ ಸೂಚನೆಯನ್ನು ನೀಡಲಾಗುತ್ತದೆ.

ಛಲವಾದಿ ಸಮುದಾಯದ ಒನಕೆ ಓಬವ್ವನ ಗಂಡನಾದ ಮುದ್ಧಹನುಮಪ್ಪ ಎಂಬುವವನು ಚಿತ್ರದುರ್ಗದ ಪಾಳೆಗಾರನಾದ ಮದಕರಿ ನಾಯಕನ ಕೋಟೆಯ ಕಾವಲುಗಾರನಾಗಿದ್ದನು. ಈತನು ಜಾವಗಹಳೆಯನ್ನು ವಾದಿಸುವವನೂ ಆಗಿದ್ದನೆಂದು ಚಾರಿತ್ರಿಕ ಉಲ್ಲೇಖವಿದೆ

**ಲೌಕಿಕ ಕಲೆಗಳು:**

ಕಲೆ ಎಂಬುದು ಯಾರ ಮನೆಯ ಸ್ವತ್ತಲ್ಲ, ಕಲೆ ಎಲ್ಲರನ್ನು ಕೈ ಬೀಸಿ ಕರೆಯುತ್ತದೆ, ಆದರೆ ಅದು ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ ಎಂಬ ಮಾತಿದೆ. ನೂಲಿನಂತೆ ಸೀರೆ, ತಾಯಿಯಂತೆ ಮಗಳು ಎಂಬ ಗಾದೆಮಾತು ಸಂಸ್ಕೃತಿಯ ಹಿನ್ನೆಲೆಯನ್ನು ಸೂಚಿಸುತ್ತದೆ. "ಜೀವನ ನಿರ್ವಹಣೆಯ ಹಿನ್ನೆಲೆಯಲ್ಲಿ ಬೆಳದ ವೃತ್ತಿ ಆಧಾರಿತ ಕಲೆಗಳನ್ನು ಲೌಕಿಕ ಕಲೆಗಳು" ಎಂದು ಪ್ರೊ. ಹಿ. ಚಿ. ಬೋರಲಿಂಗಯ್ಯನವರು ಗುರುತಿಸಿಕೊಂಡಿದ್ದಾರೆ. ತಾನು ವಾಸಿಸುವ ವಾಸ್ತವ ಜಗತ್ತಿನಲ್ಲಿ ತಾನೇ ಸೃಷ್ಟಿಸಿಕೊಂಡ ಅನೇಕ ಬಗೆಯ ಕಲೆಗಳಾಗಿವೆ.

ಮಾನವನು ಮೂಲತಃ ಅಲೆಮಾರಿ ಜೀವಿ. ಕಾಡುಮೇಡುಗಳಲ್ಲಿ ಬೆಟ್ಟಗುಡ್ಡಗಳಲ್ಲಿ ಅಲೆದು ಜೀವಿಸುತ್ತಿರುವ ಮನುಷ್ಯ ಒಂದು ಕಡೆ ನೆಲೆನಿಂತು ವಾಸಿಸತೊಡಗಿದಾಗ ತನ್ನ ಆಹಾರವನ್ನು ತಾನೇ ಉತ್ಪಾದಿಸಿಕೊಳ್ಳತೊಡಗಿದ. ಪ್ರಕೃತಿಯಲ್ಲಿ ಸಿಗುವ ಗೆಡ್ಡೆಗೆಣಸುಗಳ ಜೊತೆಗೆ ತಾನು ಕೃಷಿಯನ್ನ ಮಾಡತೊಡಗಿದ. ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳತೊಡಗಿದ. ಹೀಗೆ ಒಂದು ಕಡೆ ನೆಲೆನಿಂತ

ಮನುಷ್ಯರು ಸೇರಿ ಒಂದು ಕುಟುಂಬವಾಗಿ, ಹಲವು ಕುಟುಂಬಗಳು ಸೇರಿ ಒಂದು ಸಮುದಾಯವಾಗಿ ಒಂದು ಅಥವಾ ಹಲವು ಸಮುದಾಯಗಳು ಸೇರಿ ಒಂದು ಸಮಾಜವಾಗಿ ರೂಪು ತಳೆಯಿತು. ಹೀಗೆ ರೂಪುಗೊಂಡ ಸಮಾಜದಲ್ಲಿ ಹಲವು ಸಮುದಾಯಗಳು ತಮಗೆ ಆಸಕ್ತಿಯಿರುವ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಮೂಲಕ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸಿದರು. ತಾವು ಮಾಡುವ ಕಸುಬಿನಿಂದಲೇ ತನ್ನನ್ನು ತಾನು ಗುರ್ತಿಸಿಕೊಂಡರು. ಆ ಕಸುಬುಗಳೇ ಮುಂದೆ ಜಾತಿಗಳಾಗಿ ಮಾರ್ಪಟ್ಟವು. ಒಂದು ಕಾಲದಲ್ಲಿ ಸಂಸ್ಕೃತಿಯ ಭಾಗವಾಗಿ ಬಿಂಬಿಸಲ್ಪಡುತ್ತಿದ್ದ ಕಸುಬುಗಳು ಮತ್ತು ಆ ಕಸುಬಿಗಾಗಿ ಬಳಸುತ್ತಿದ್ದ ಪರಿಕರಗಳು ಅಪಮಾನ ಮತ್ತು ಅವಹೇಳನಕಾರಿಯಾಗಿಯೂ ಬಳಕೆಯಾಗಿರುವುದು ಇಂದಿಗೂ ಇದೆ. ಹಾಗೆಯೇ ಬೇರೆ ಬೇರೆ ರೂಪ ವಿನ್ಯಾಸಗಳನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಹಾಗೆ ನೋಡಿದರೆ ವೇದವನ್ನೋದುವವನನ್ನು ಬ್ರಾಹ್ಮಣ ಎಂತಲೂ, ರಾಜ್ಯಾಧಿಕಾರವನ್ನು ಹೊಂದಿರವವರಿಗೆ ಕ್ಷತ್ರಿಯನೆಂತಲೂ, ವ್ಯಾಪಾರ-ವ್ಯವಹಾರ ಮಾಡುವವರನ್ನು ವೈಶ್ಯನೆಂತಲೂ ಇವರಿಗೆ ಸೇವೆಯನ್ನು ಮಾಡುವವರಿಗೆ ಶೂದ್ರನೆಂತಲು ಕರೆಯುವುದುಂಟು. ಈ ಶೂದ್ರರಲ್ಲಿಯೇ ಒಕ್ಕಲುತನ ಕೆಲಸ ಮಾಡುವವರನ್ನು ಒಕ್ಕಲಿಗ ಎಂತಲೂ, ನೇಯುವವರನ್ನು ನೇಕಾರರೆಂತಲೂ, ಬಡಗಿ ಕೆಲಸ ಮಾಡುವವರನ್ನು, ಕುಂಬಾರರೆಂತಲೂ, ಕಬ್ಬಿಣದ ಕೆಲಸವನ್ನು ಮಾಡುವವರನ್ನು ಕಮ್ಮಾರರೆಂತಲೂ ಗುರ್ತಿಸಿರುವುದುಂಟು. ಶೂದ್ರವರ್ಗಕ್ಕೂ ಸೇರದೇ ಇರುವ ಪಂಚಮ ವರ್ಣಕ್ಕೆ ಸೇರಿಸಲ್ಪಟ್ಟ ಅನೇಕ ಸಮುದಾಯಗಳೂ ಇವೆ. ಅಂತ್ಯಜರೆಂತಲೂ, ಅಸ್ಪೃಶ್ಯರೆಂತಲೂ ಈ ಸಾಮಾಜಿಕ ವ್ಯವಸ್ಥೆಯಿಂದ ದೂರ ತಲ್ಲಲ್ಪಟ್ಟ ಸಮುದಾಯವಾಗಿ ಹೊಲೆಯ, ಮಾದಿಗ ಮೊದಲಾದ ಸಮುದಾಯಗಳನ್ನು ಕಾಣಬಹುದು. ಅಂತಹ ಶೂದ್ರಾತಿ ಶೂದ್ರ ಸಮುದಾಯಗಳಲ್ಲಿ ಒಂದಾದ 'ಹೊಲೆಯ ಅಥವಾ ಛಲವಾದಿ' ಸಮುದಾಯವು ತನ್ನದೇ ಆದ ಕುಲವೃತ್ತಿಗಳನ್ನು ನಂಬಿಕೊಂಡೇ ಪರಂಪರೆಯಿಂದ ಪರಿವ್ಯಾಪಿಸಿಕೊಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗದ ಛಲವಾದಿ ಸಮುದಾಯವು ಅನುಸರಿಸಿಕೊಂಡು ಬಂದಿರುವ ಕುಲದ ಕಲೆಗಳಾವುವು? ಅವುಗಳ ನೆಲೆ ಬೆಲೆ ಏನು ಎಂಬುದನ್ನು ಈ ಅಧ್ಯಯನದಲ್ಲಿ ವಿಶ್ಲೇಷಣೆಗೆ ಒಳಪಡಿಸುವುದೇ ಮುಖ್ಯ ಉದ್ದೇಶವಾಗಿದೆ.

ಛಲವಾದಿಗಳು ಅನುಸರಿಸಿಕೊಂಡು ಬರುತ್ತಿರುವ ಕಲೆಗಳು ಚಮ್ಮಾರಿಕೆ, ವಾದ್ಯಗಾರಿಕೆ, ಬಡಗಿ, ಕಟ್ಟಡ ಕೆಲಸ, ಸಂಗೀತ ಕಲಿಸುವುದು, ಇನ್ನೂ ಹಲವು ಕಲೆಗಳನ್ನು ಗಮನಿಸಿಬಹುದು.

**ಅ) ಚಮ್ಮಾರಿಕೆ**

ಚರ್ಮಗಾರಿಕೆಯನ್ನು ತಮ್ಮ ಕುಲವೃತ್ತಿಯನ್ನಾಗಿಸಿಕೊಂಡು ಇಂದಿಗೂ

ಇದನ್ನೇ ಸ್ವಲ್ಪ ಪ್ರಮಾಣದಲ್ಲಿ ಮುಂದುವರೆಸಿಕೊಂಡು ಬರಲಾಗುತ್ತಿದೆ. ಅಂತಹ ಚರ್ಮದ ಪರಿಕರಗಳಲ್ಲಿ ಚಪ್ಪಲಿಗಳನ್ನು ಮಾದಿಗ ಸಮುದಾಯ ತಯಾರಿಸಿದರೆ ಉರುಮೆ, ತಮಟೆ, ನಗಾರಿ, ಡೋಲು ಮೊದಲಾದವುಗಳನ್ನು ಚರ್ಮದ ಪರಿಕರಗಳನ್ನು ತಯಾರಿಸುವವರು ಛಲವಾದಿ ಸಮುದಾಯದವರೇ ಆಗಿದ್ದಾರೆ. ಮತ್ತು ಇವುಗಳನ್ನು ನುಡಿಸುವವರೂ ಸಹ ಛಲವಾದಿ ಸಮುದಾಯದವರೇ ಆಗಿದ್ದಾರೆ. ವಂಶಪಾರಂಪರಿಕವಾಗಿ ಈ ವೃತ್ತಿಯನ್ನು ಮುಂದುವರೆಸಿಕೊಂಡು ಬರಲಾಗುತ್ತಿದೆ.

ಈ ವಾದ್ಯಗಳನ್ನು ತಯಾರಿಸಲು ಬೇಕಾಗುವ ಚರ್ಮವನ್ನು ತಾವೇ ಹದ ಮಾಡಿ, ಅದಕ್ಕೆ ಬೇಕಾಗುವ ಕಬ್ಬಿಣ ಹಾಗೂ ಮರದ ಕಟ್ಟಿಗೆಯಿಂದ ಹೊಳಲುಗಳನ್ನು ತಾವೇ ಸ್ವತಃ ಸಿದ್ಧಪಡಿಸಿಕೊಂಡು ಇಂತಹ ಸ್ವನಿಮಾಧುರ್ಯದ ಪರಿಕರಗಳನ್ನು ತಯಾರಿಸುತ್ತಿದ್ದರು. ಇದರಿಂದ ಬಂದ ಹಣದಿಂದ ತಮ್ಮ ಜೀವನ ನಿರ್ವಹಣೆಯನ್ನು ಮಾಡುತ್ತಿದ್ದರು. ಅಂದರೆ ಈ ಚರ್ಮವಾದ್ಯ ಪರಿಕರಗಳನ್ನು ಮಾಡುವುದರಿಂದಲೂ ಹಾಗೂ ವಾದಿಸುವುದರಿಂದಲೂ ಈ ಸಮುದಾಯವು ಹಣವನ್ನು ಗಳಿಸಿಕೊಳ್ಳುತ್ತಿತ್ತು. ಆದರೆ ಇಂದು ಈ ಚರ್ಮವಾದ್ಯಗಳ ಬದಲಾಗಿ ಪ್ಲಾಸ್ಟಿಕ್ ಮತ್ತು ಫೈಬರ್‌ಯುಕ್ತ ವಾದ್ಯಗಳು ಪ್ರವೇಶ ಪಡೆದಿವೆ. ಮತ್ತು ಅವನ್ನು ನುಡಿಸುವವರೂ ಸಹ ಅದೇ ಜಾತಿಯವರಾಗಿರದೇ ಬೇರೆ ಅನ್ಯ ಕೋಮಿನವರೂ ಸಹ ತಮಟೆ, ಅರೆ ಹಾಗೂ ಡೋಲುಗಳನ್ನು ನುಡಿಸುತ್ತಿದ್ದಾರೆ. ಇದರಿಂದ ಛಲವಾದಿಯವರು ಗಳಿಸಿಕೊಳ್ಳುತ್ತಿದ್ದ ವರಮಾನದ ಮಾರ್ಗ ಸ್ತಗಿತವಾಯಿತೆಂದು ಒಂದು ಕ್ಷಣ ಅನ್ನಿಸಿದರೂ ಇಂತಹ ಕೀಳು ವೃತ್ತಿಗಳಿಂದಲೇ ತಳ ಸಮುದಾಯಗಳನ್ನು ಕೀಳಾಗಿ ಕಾಣಲಾಗುತ್ತಿತ್ತು ಹಾಗಾಗಿ ತಳ ಸಮುದಾಯಗಳು ಅನ್ಯ ವೃತ್ತಿಗಳ ಕಡೆಗೆ ಮುಖಮಾಡಿರುವುದು ಕಂಡುಬರುತ್ತದೆ."[5]

**ಆ) ವಾದ್ಯಗಾರಿಕೆ**

ಚಿತ್ರದುರ್ಗ ಜಿಲ್ಲೆಯ ಈ ಛಲವಾದಿ ಸಮುದಾಯದಲ್ಲಿ ಕೆಲವು ಮನೆತನಗಳು ಶಹನಾಯಿ, ಡೋಲು, ಉರುಮೆ, ಕಹಳೆ, ಕ್ಲರ್‌ನೇಟ್, ಹರ್‌ಮೋನಿಯಂ ವಾದ್ಯಗಳನ್ನು ನುಡಿಸುವುದರಲ್ಲಿ ನಿಪುಣರಿದ್ದಾರೆ. ಇವರು ತಮ್ಮ ತುತ್ತಿನ ಚೀಲವನ್ನು ತುಂಬಿಸಿಕೊಳ್ಳುವುದಕ್ಕೆ ಆ ಜಿಲ್ಲೆಯ ಧಾರ್ಮಿಕ, ಲೌಕಿಕ, ಪ್ರದರ್ಶನ ಹಾಗೂ ಮನೋರಂಜನ ಕಾರ್ಯಕ್ರಮಗಳಿಗೆ ಇವರೇ ವಾದ್ಯಗಾರರು. ಇದೇ ಕಲೆಯಿಂದ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಇವರ ಕಲೆಗೆ ಮೆಚ್ಚಿ ಅನೇಕ ಸಂಘ ಸಂಸ್ಥೆಗಳು ಹಾಗೂ ಜಿಲ್ಲಾ ಹಂತದ ಕನ್ನಡ ಸಂಸ್ಕೃತಿ ಇಲಾಖೆ ಇವರಿಗೆ ಪ್ರಶಸ್ತಿ ಪುರಸ್ಕಾರಗಳು ಹಾಗು ಸನ್ಮಾನಗಳನ್ನು ನೀಡುತ್ತ ಬರುತ್ತಿದೆ. ಅಂತವರುಗಳಲ್ಲಿ ಚಿತ್ರದುರ್ಗದ ಶಾರದ ಬ್ಯಾಂಡಿನ ಕಲಾರತ್ನ ಮಾಸ್ಟರ್ ಗುರುಮೂರ್ತಿಯವರು ಒಬ್ಬರು ಹಾಗೂ ಸಂಗೀತ

ಸಿರಿ ಪ್ರಶಸ್ತಿ ಪುರಸ್ಕೃತ ಹುಲ್ಲೇಹಾಳ್ ಟಿ. ಬಸವರಾಜ ರವರಿಗೆ ಜಿಲ್ಲಾಡಳಿತ ದಾವಣಗೆರೆ ಜಿಲ್ಲಾ ಮಟ್ಟದ ಕರ್ನಾಟಕ ರಾಜ್ಯೋತ್ಸವ ಸನ್ಮಾನ ನೀಡಿದೆ. ಛಲವಾದಿ ಸಮುದಾಯದವರಿಗೆ ಹೀಗೆ ಹತ್ತು ಹಲವು ಸನ್ಮಾನಗಳ ಜೊತೆಗೆ ಸರ್ಕಾರ ಸಾಧಕ ಕಲಾವಿದರಿಗೆ ಕಲಾ ಪಿಂಚಣಿಯನ್ನು ಕೂಡ ನೀಡುತ್ತಿದೆ.

**ಇ) ಬಡಗಿ**

ಆಧುನಿಕತೆಯ ಪ್ರಭಾವದಿಂದ ಯಾರು ಯಾವ ಕೆಲಸವನ್ನಾದರೂ ಮಾಡಬಹುದಾದ ಮುಕ್ತತೆಯು ಸೃಷ್ಟಿಯಾಗಿದೆ. ಆದ್ದರಿಂದ ಭಾರತೀಯರು ಕುಲವೃತ್ತಿಗಳನ್ನು ಬಿಟ್ಟು ರ್ಯಾಯ ವೃತ್ತಿಗಳ ಕಡೆಗೆ ಹೆಚ್ಚು ವಾಲುತ್ತಿರುವುದು ಕಂಡುಬರುತ್ತದೆ. ಅಂತಹ ವೃತ್ತಿಗಳಲ್ಲಿ ಬಡಗಿ ಕೆಲಸವೂ ಒಂದಾಗಿದೆ. ಈ ವೃತ್ತಿಯನ್ನು ಬಡಗಿ ಮಾತ್ರನೇ ಮಾಡುತ್ತಿದ್ದ. ಆದರೆ ಇದು ಇಂದು ಯೂನಿವರ್ಸಲ್ ವೃತ್ತಿಯಾಗಿ ಬದಲಾಗಿದೆ. ಆದ್ದರಿಂದಲೇ ಬಡಗಿ ವೃತ್ತಿಯನ್ನು ಛಲವಾದಿ ಸಮುದಾಯದವೂ ತಮ್ಮದಾಗಿಸಿಕೊಂಡಿದೆ. ಹಳ್ಳಿಗಳಲ್ಲಿ ಹೆಚ್ಚಾಗಿ ಕೃಷಿಗೆ ಸಂಬಂಧಿತ ಉಪಕರಣಗಳನ್ನು, ಮನೆಗೆ ಬೇಕಾದ ಉಪಕರಣಗಳನ್ನು ಮಾಡುವಲ್ಲಿ ಇವರು ಯಶಸ್ವಿಯಾಗಿದ್ದಾರೆ. ಇದು ಒಂದು ರೀತಿಯಲ್ಲಿ ಜೀವನ ನಿರ್ವಹಣೆಗೂ ಅನುವು ಮಾಡಿಕೊಟ್ಟಿದೆ.

**ಈ) ಸಂಗೀತ ಕಲಿಸುವುದು**

ಇದು ಸಹ ಇಂದು ಪಟ್ಟಣ, ನಗರ ಪ್ರದೇಶಗಳಲ್ಲಿ ಛಲವಾದಿ ಸಮುದಾಯಗಳ ತಮ್ಮ ಜೀವನೋಪಾಯಕ್ಕಾಗಿ ಕಂಡುಕೊಂಡ ವೃತ್ತಿಯಾಗಿದೆ. ಇದು ಇಂದು ಅತಿ ಹೆಚ್ಚು ಜನರನ್ನು ಆಕರ್ಷಿಸುವ ಕಲೆಯಾಗಿ, ವೃತ್ತಿಯಾಗಿ ಮಾರ್ಪಡುತ್ತಿದೆ. ಸಂಗೀತವು ಕೇವಲ ಮೇಲ್ವರ್ಗದವರ ಸ್ವತ್ತಾಗಿ ಉಳಿದುಕೊಂಡಿದ್ದ ಸಂಗೀತ ಕಲೆಯು ತಳ ಸಮುದಾಯಗಳೂ ಸಹ ಇದನ್ನೇ ನಂಬಿಕೊಂಡು ಬದುಕುತ್ತಿರುವುದು ಕಂಡುಬರುತ್ತದೆ. ರಾಷ್ಟ್ರೀಯ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಬಹುದಾದ ಒಂದು ವೇದಿಕೆಯಾಗಿಯೂ ಸಂಗೀತದಲ್ಲಿ ಅವಕಾಶವಿದೆ. ಇದು ಮೂಲತಃ ತಳವರ್ಗದ ಸಮುದಾಯದಲ್ಲಿ ಪರಂಪರೆಯಿಂದಲೂ ಉಳಿದುಕೊಂಡು ಬಂದಿದ್ದ ಕಲೆಯಾಗಿತ್ತು. ಆದರೆ ಇಂದು ಅದು ಜನಪದ ಪರಂಪರೆಗಿಂತಲೂ ಶಿಷ್ಟಪರಂಪರೆಯ ನೆಲೆಯಲ್ಲಿಯೇ ಹೆಚ್ಚು ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ಇಂದು ಈ ಸಮುದಾಯವೂ ಸಹ ಇದನ್ನು ನೆಚ್ಚಿಕೊಂಡಿರುವುದು ಕಂಡುಬರುತ್ತದೆ."[6]

ಬೇಸಿಗೆ ಕಾಲದಲ್ಲಿ ಯಾವುದೇ ಕೃಷಿ ಚಟುವಟಿಕೆಗಳು ಇಲ್ಲದ ಕಾರಣ ಸಂಗೀತ ಕಲಿತ ವಿದ್ವಾಂಸರುಗಳನ್ನು ಛಲವಾದಿ ಸಮುದಾಯದ ಹಿರಿಯರು ತಮ್ಮ ತಮ್ಮ ಊರುಗಳಿಗೆ ಇವರನ್ನು ಕರೆದುಕೊಂಡು ಬಂದು ತಮ್ಮ ಸಮುದಾಯದ ಎಲ್ಲ ಮಕ್ಕಳನ್ನು ಒಂದು ಕಡೆ ಸೇರಿಸಿ ಮಳೆಗಾಲ ಪ್ರಾರಂಭವಾಗುವ ತನಕ ಈ ಮಕ್ಕಳಿಗೆ

ಸಂಗೀತ ಕಲಿಸುವಂತೆ ಎಲ್ಲ ಸಿದ್ದತೆಯನ್ನು ಮಾಡಿ ಸಂಗೀತ ಕಲಿಸಲು ವ್ಯವಸ್ಥೆ ಮಾಡುತ್ತಾರೆ. ಕೊನೆಗೆ ಆ ಶಿಕ್ಷಕರಿಗೆ ಮನೆಯಲ್ಲಿದ್ದ ಧವಸ ಧಾನ್ಯ ಸ್ವಲ್ಪ ಮಟ್ಟಿನ ಹಣವನ್ನು ನೀಡಿ ಗೌರವಿಸುತ್ತಾರೆ. ಹೀಗೆ ಮಾಡುವುದರಿಂದ ಕಲೆ ಉಳಿಯುವಿಕೆಗೂ ಒಂದು ದಾರಿಯಾಗುತ್ತದೆ ಮಕ್ಕಳ ಭವಿಷ್ಯವನ್ನು ರೂಪಿಸಿದಂತಾಗುತ್ತದೆ.

**ಸಮುದಾಯದ ಕಲೆಗಳನ್ನು ಉಳಿಸುವ ಜವಾಬ್ದಾರಿ:**

ಕಲೆಗಳು ನಮ್ಮ ಸಂಸ್ಕೃತಿಯ ಆತ್ಮ, ಇತಿಹಾಸದ ದರ್ಪಣ ಮತ್ತು ನಮ್ಮ ಭಾವನೆಗಳ ವ್ಯಕ್ತಪಡಿಸುವ ಮಾಧ್ಯಮ. ಅವು ನಮ್ಮನ್ನು ಮಾನವರನ್ನಾಗಿ ಮಾಡುತ್ತವೆ ಆದರೆ ಆಧುನಿಕ ಜಗತ್ತಿನಲ್ಲಿ ಈ ಸಮುದಾಯದ ಕಲೆಗಳು ಹಲವಾರು ಸವಾಲುಗಳನ್ನು ಎದುರಿಸುತ್ತಿವೆ. ಹಿರಿಯರು ಅನಾದಿ ಕಾಲದಿಂದಲೂ ಉಳಿಸಿಕೊಂಡು ಬಂದಿರುವ ಕಲೆಗಳು ಇಂದು ಕ್ಷೀಣಿಸುತ್ತಿರುವುದು ನಮ್ಮೆಲ್ಲರ ಕಣ್ಣ ಮುಂದೆ ಕನ್ನಡಿಯಾಗಿ ಕಾಣುತ್ತಿರುವುದು ಒಪ್ಪಿಕೊಳ್ಳಲೇಬೇಕಾಗಿದೆ, ಏಕೆಂದರೆ ಯುವ ಜನತೆ ಈ ಕಲೆಗಳನ್ನು ಕಲಿಯಲು ಆಸಕ್ತಿ ತೋರುತ್ತಿರುವುದು ಅಷ್ಟಾಗಿ ಕಾಣುತ್ತಿಲ್ಲ. ಆಧುನಿಕತೆಯ ಬೆಳವಣಿಗೆಯಿಂದ ಯುವ ಜನಾಂಗ ನಗರಗಳತ್ತ ಮುಖಮಾಡುತ್ತಿರುವುದು ಸಾಮಾನ್ಯವಾಗಿದೆ.

ಒಟ್ಟಾರೆ ಇಂದು ಕಲೆಗಳು ವೃತ್ತಿಗಳಾಗಿ ಕೇವಲ ಆವೊತ್ತಿನ ಬದುಕಿಗಾಗಿ ಅವು ಉಳಿದುಕೊಂಡಿದ್ದಾವೆಯೇ ಹೊರತು, ಶಾಶ್ವತ ಬದುಕಿನ ನಿರ್ವಹಣಾ ಶಕ್ತಿಯನ್ನು ಅವು ಹೊಂದಿಲ್ಲ ಆದರೆ ಒಂದಂತೂ ಸತ್ಯ. ಪಾರಂಪರಿಕ ಕುಲವೃತ್ತಿಗಳ ಸಂದರ್ಭದಲ್ಲಿ ಇವರನ್ನು ಕೀಳಾಗಿ ಕಾಣಲಾಗುತ್ತಿತ್ತು. ಆದರೆ ಅವುಗಳನ್ನು ಬಿಟ್ಟು ರ್ಯಾಯ ಕಸುಬುಗಳು ತಕ್ಕ ಮಟ್ಟಿಗೆ ಗೌರವವನ್ನೂ ಆತ್ಮಾಭಿಮಾನವನ್ನು ತಂದುಕೊಡುವ ವೃತ್ತಿಗಳಾಗಿ ಆಧುನಿಕ ವೃತ್ತಿಗಳ ಮೂಲಕ ಸಾಧ್ಯವಾಗಿದೆ.

ಒಟ್ಟು ಭಾರತದ ಎಲ್ಲ ನೆಲಮೂಲದ ಕುಲ ವೃತ್ತಿಗಳು ಇಂದು ಜಾಗತೀಕರಣದ ತಲ್ಲಣಕ್ಕೆ ಸಿಲುಕಿ ಮರೆಯಾಗುತ್ತಿವೆ. ಆದರೆ ಕುಲಗಳು ಅರ್ಥಾತ್ ಜಾತಿಗಳ ಮಾತ್ರ ಹಾಗೆಯೇ ಉಳಿದುಕೊಂಡಿವೆ. ಆ ಜಾತಿಗಳು ಪರಂಪರೆಯಿಂದಲೂ ಮುಂದುವರೆಸಿಕೊಂಡು ಬರುತ್ತಿದ್ದ ಕುಲ ಕಸುಬುಗಳು ಕಾರ್ಪೋರೇಟ್ ಕಂಪನಿಗಳ ಪಾಲಾಗಿ ಕೇವಲ ವ್ಯಾಪಾರೀಕರಣಕ್ಕೆ ಒಳಗಾಗುತ್ತಿವೆ. ಇಲ್ಲಿ ಯಾವ ನೈತಿಕ ಮೌಲ್ಯಗಳು ಮಾನವೀಯ ಮೌಲ್ಯಗಳು ಇಲ್ಲಿ ಚಲಾವಣೆಯಾಗುತ್ತಿಲ್ಲ. ಆದ್ದರಿಂದಲೇ ಮಹಾತ್ಮ ಗಾಂಧೀಜಿಯವರು ಗುಡಿ ಮತ್ತು ಸಣ್ಣ ಕೈಗಾರಿಕೆಗಳು ಅಭಿವೃದ್ಧಿ ಹೊಂದಿದಾಗ ಮಾತ್ರ ಒಂದು ದೇಶದ ಅಭಿವೃದ್ಧಿ ಸಾಧ್ಯ ಎಂದು ಆಶಿಸಿದ್ದರು. ಆದರೆ ಆಶಯಗಳು ಇಂದು ಬದಲಾಗಿ ಹೋಗಿವೆ. ಉದಾರತ್ವವನ್ನು ಪಡೆದುಕೊಳ್ಳುವ ಮೂಲಕ ಆರ್ಥಿಕತೆಯನ್ನು ಹೆಚ್ಚಿಸುವ ವೃತ್ತಿಗಳು ಮಾತ್ರ ಮೇಲ್ವರ್ಗದ ಪಾಲಾಗುತ್ತಿವೆ. ಕೀಳು

ಕಸುಬುಗಳು ಮಾತ್ರ ಹಾಗೆಯೇ ಯತಾಸ್ಥಿತಿಯಲ್ಲಿ ಮುಂದುವರೆಯುತ್ತಿರುವುದು ದುರಂತವೇ ಸರಿ.

ಆದರೆ ಇಂದು ಸಮುದಾಯದ ಕಲೆಗಳು ಸಂಕ್ರಮಣಾವಸ್ಥೆಗೆ ತಲುಪಿವೆ ಇವುಗಳ ಅಳಿವು-ಉಳಿವುಗಳ ಬಗ್ಗೆ ಗಂಭೀರ ಚಿಂತನೆ ಮಾಡಬೇಕಿದೆ.

ಕಲೆಯನ್ನು ಉಳಿಸಲು ಸಮುದಾಯದ ಯುವಕ ಯುವತಿಯರಿಗೆ ಸಂಘ ಸಂಸ್ಥೆಗಳು, ಸಂಘಟನೆಗಳು, ಸರ್ಕಾರಗಳು ಇತ್ತ ಗಮನಹರಿಸಿ ಸಂಗೀತ ತರಬೇತಿ ಶಾಲೆಗಳನ್ನು ತೆರೆಯುವುದರ ಜೊತೆಗೆ ಸ್ಕಾಲರ್‌ಶಿಪ್ ಕೊಡುವುದು, ಸನ್ಮಾನಗಳನ್ನು ನೀಡಿ ಗೌರವಿಸುವುದು, ಸಂಗೀತ ಕಲಿತವರಿಗೆ ಸಂಗೀತ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಸರ್ಕಾರಿ ಹುದ್ದೆಗಳನ್ನು ನೇಮಕ ಮಾಡಿಕೊಳ್ಳುವುದು ಮಾಡಬೇಕಾಗಿದೆ. ಈ ರೀತಿ ಮಾಡಿದ್ದಾದರೆ ಕಲೆ ಉಳಿವುದರಲ್ಲಿ ಎರಡು ಮಾತಿಲ್ಲ ಹಾಗಾಗಿ ಇತ್ತ ಕಡೆ ಸರ್ಕಾರಗಳು ಗಮನ ಹರಿಸಬೇಕಾಗಿದೆ.

**ಅಡಿ ಟಿಪ್ಪಣಿಗಳು:**

1. ರಮೇಶ ಆರ್., (2020), ಛಲವಾದಿ ಸಮುದಾಯದ ಜನಪದ ಕಲೆಗಳು, ಸಂಶೋಧನ ಮಹಾಪ್ರಬಂಧ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ಪು.ಸಂ. 118
2. ಅದೇ, ಪು.ಸಂ. 120
3. ವಕ್ತೃ, ಮಂಜುನಾಥ, ನೆಹರುನಗರ, ಚಿತ್ರದುರ್ಗ.
4. ರಮೇಶ ಆರ್., (2020), ಛಲವಾದಿ ಸಮುದಾಯದ ಜನಪದ ಕಲೆಗಳು, ಸಂಶೋಧನ ಮಹಾಪ್ರಬಂಧ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ಪು.ಸಂ. 133
5. ವಕ್ತೃ, ಚಿದಾನಂದಪ್ಪ ಮತ್ತು ಇತರರು, ಕಾಮಸಮುದ್ರ, ಚಿತ್ರದುರ್ಗ ಜಿಲ್ಲೆ.
6. ವಕ್ತೃ, ಟಿ. ಬಸವರಾಜ ಹುಲ್ಲೇಹಾಳ್, ಚಿತ್ರದುರ್ಗ ಜಿಲ್ಲೆ.

## ಪರಾಮರ್ಶನ ಗ್ರಂಥಗಳು:


1. ಬೋರಲಿಂಗಯ್ಯ ಹಿ.ಚಿ., (1996), ಕರ್ನಾಟಕ ಜನಪದ ಕಲೆಗಳ ಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಸುಬ್ಬಲಕ್ಷ್ಮಮ್ಮ ಜಿ.ಎ., (2000), ಕರ್ನಾಟಕ ಜನಪದ ವಾದ್ಯಗಳು, ಜ್ಞಾನೋದಯ ಪ್ರಕಾಶನ, ಬೆಂಗಳೂರು.
3. ರಮೇಶ ಆರ್., (2020), ಛಲವಾದಿ ಸಮುದಾಯದ ಜನಪದ ಕಲೆಗಳು, ಸಂಶೋಧನ ಮಹಾಪ್ರಬಂಧ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.
4. ಉಮೇಶ್ ಟಿ.ಬಿ., (2016), ರಾಮನಗರ ಜಿಲ್ಲೆಯ ಹೊಲೆಯರ ಜಾನಪದೀಯ ಅಧ್ಯಯನ, ಸಂಶೋಧನ ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.